ಎಂ ಸಿ ನಂ. 37/2023
ಪಿ. ಡಬ್ಲ್ಯೂ- 1

(ಇಂದು ದಿಃ 24-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು ಶ್ರೀ.ಆರ್ ಎಮ್ ವಕೀಲರಿಂದ :-

ನನ್ನ ಮತ್ತು ಎದುರುದಾರಳ ವಿವಾಹ ನಿಶ್ಚಯ ದಿ. 16.12.2022 ರಂದು ಆಗಿದೆ. ನಮ್ಮ ಮದುವೆ ದಿ. 22.05.2023 ರಂದು ಆಗಿದೆ ಎಂದರೆ ಸರಿ. ವಿವಾಹ ನಿಶ್ಚಯ ಆದ ನಂತರ ಸುಮಾರು 5 ತಿಂಗಳ ನಂತರ ನಮ್ಮ ಮದುವೆ ಆಗಿದೆ. ಎದುರುದಾರಳ ತಾಯಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರ ತಂದೆ ಬಿಜ್ಜನಹಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಬಿಜ್ಜನಹಳ್ಳಿಯಲ್ಲಿ ನನ್ನ ಹೆಂಡತಿ ಮತ್ತು ಅವರ ತಂದೆ ವಾಸವಿರುತ್ತಾರೆ ಎಂದರೆ ಸರಿ. ವಿವಾಹ ನಿಶ್ಚಯ ಆದ ನಂತರ ನಾನು ಎದುರುದಾರಳ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಅದೇ ರೀತಿ ಫೋನ್ ನಲ್ಲಿ ಕೂಡ ಅವಳ ಜೋತೆ ಮಾತಾನಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸೇಡಂ ನಿವಾಸಿ ಎಂದರೆ ಸರಿ. ಸೇಡಂನಿಂದ ಬಿಜ್ಜನಹಳ್ಳಿ 15 ಕಿ. ಮೀ. ದೂರ ಇದೆ ಎಂದರೆ ಸರಿ. ನಾನು ವಿವಾಹ ನಿಶ್ಚಯ ಆದ ನಂತರ ತಿಂಗಳಿಗೆ 2 ಮತ್ತು 3 ಬಾರಿ ಎದುರುದಾರಳ ಮನೆಗೆ ಹೋಗಿ ಅವಳನ್ನು ಭೇಟಿ ಮಾಡಿ ಮಾತಾನಾಡಿಕೊಂಡು ಬರುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ಹೋದಾಗ ಹೇಗಾದರು ಹೆಂಡತಿಯಾಗುವುಳು ಎಂದು ಅವಳನ್ನು ಪುಶಲಾಹಿಶಿ ಅವಳ ಜೋತೆ ಧಹಿಕ ಸಂಪರ್ಕ ಮಾಡಿದ್ದೆ ಎಂದರೆ ಸರಿಯಲ್ಲ. ಆ ರೀತಿ ನಾನು ದೈಹಿಕ ಸಂಪರ್ಕ ಮಾಡಿದ್ದ ಕಾರಣಕ್ಕೆ ಮದುವೆ ದಿನಕ್ಕೆ ಎದುರುದಾರಳು ಒಂದು ವರೆ ತಿಂಗಳು ಗರ್ಬಿಣಿಯಾಗಿದ್ದಳು ಎಂದರೆ ಸರಿಯಲ್ಲ. ಈ ಸಂಗತಿಯನ್ನು ಎದುರುದಾರರ ಮನೆಯವರು ನನಗೆ ಮತ್ತು ನನ್ನ ತಂದೆ ತಾಯಿಗೆ ತಿಳಿಸಿದರು ಎಂದರೆ ಸರಿಯಲ್ಲ. ಆ ಸಂಗತಿ ನಮ್ಮ ಮನೆಯಲ್ಲಿ ಗೊತ್ತಾದ ನಂತರ ನಮ್ಮ ಮದುವೆಯ ನ್ನು ದಿ. 22.05.2023 ರಂದು ಮಾಡಿದರು ಎಂದರೆ ಸರಿಯಲ್ಲ. ಮದುವೆ ಮುಂಚೆ ಈ ಸಂಬಂಧ ಪಂಚಾಯಿತಿ ಆಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯಿತಿ ತೀರ್ಮಾನದ ಪ್ರಕಾರ ನನ್ನ ತಾಯಿ ನನ್ನ ಮದುವೆಯನ್ನು ಬೇಗನೆ ಮಾಡಿದರು ಎಂದರೆ ಸರಿಯಲ್ಲ.

ಎದುರುದಾರರಿಗೆ ದಿ. 11.10.2023 ರಂದು ಜನಿಸಿದ ಅನಿತಾ ನನ್ನ ಮಗು ಎಂದರೆ ಸರಿಯಲ್ಲ. ನಾನು ಡಿಎನ್ ಎ ಟೆಸ್ಟ ಮಾಡಿಸಲು ಕೇಳಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ಎದುರಾದರರು ಡಿಎನಎ ಪರೀಕ್ಷೆಗೆ ಸಿದ್ದರಿದ್ದಾರೆ ಎಂದರೆ ನಾನು ತಯಾರು ಇದ್ದೇನೆ ಎಂದು ಹೇಳುತ್ತಾರೆ. ನಾನು ಸಾಕಷ್ಟು ಬಾರಿ ಹೊಟ್ಟೆ ಏಕೆ ಮುಂದೆ ಕಾಣುತ್ತಿದೆ ಎಂದು ಎದುರುದಾರರನ್ನು ಕೇಳಿದಾಗ ಎದುರುದಾರರು ಮತ್ತು ಅವರ ತಾಯಿ ಕೆಲವು ಹೆಣ್ಣು ಮಕ್ಕಳ ಹೊಟ್ಟೆ ಮುಂದೆ ಇರುತ್ತದೆ ಎಂದು ನನಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 10.10.2023 ರಂದು ಸ್ಕ್ಯಾನಿಂಗ ಮಾಡಿಸಿದಾಗ 4 ತಿಂಗಳ ಗರ್ಬ ಇದೆ ಎಂದು ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನ್ನಿಂದ ಗರ್ಬಿಣಿಯಾಗಿದ್ದರು ಮತ್ತು ಆ ಸಂಗತಿಯನ್ನು ಎದುರುದಾರರು ಮತ್ತು ಅವರ ತಂದೆ ತಾಯಿ ನನಗೆ ಹೇಳಿದ್ದರು ಕೂಡ ಅವಳು ಗರ್ಬಿಣಿ ಆಗಿರು ವ ಸಂಗತಿಯನ್ನು ನನ್ನಿಂದ ಮುಚ್ಚಿಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ತಾಯಿ ಎದುರುದರಳು ಕಪ್ಪು ಇದ್ದಾಳೆ ಎಂದು ಅವಳ ಮೇಲೆ ಹಲ್ಯೆ ಮಾಡಿ ಅವಳನ್ನು ಮನೆಯಿಂದ ಹೊರ ಹಾಕಿದ್ದೇವೆ ಎಂದರೆ ಸರಿಯಲ್ಲ. ಎದುರುದಾರರಿಗೆ ವಿವಾಹ ವಿಚ್ಚೇದನ ಕೊಟ್ಟು ನಾನು

ಇನ್ನೊಂದು ಮದುವೆ ಮಾಡಿಕೊಳ್ಳುವ ತಯಾರಿಯಲ್ಲಿದ್ದೇನೆ ಎಂದರೆ ಸರಿಯಲ್ಲ. 2 ನೇ ಮದುವೆ ಮಾಡಿಕೊಳ್ಳುವ ಉದ್ದೇಶ ದಿಂದ ಎದುರುದಾರರು ಮದುವೆ ಮುಂಚೆ ಬೇರೆ ವ್ಯಕ್ತಿಯಿಂದ ಗರ್ಭಿಣಿ ಯಾಗಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಜನಿಸಿರುವ ಮಗು ನನ್ನ ಮಗು ಎಂದರೆ ಸರಿಯಲ್ಲ. ನನ್ನ ಮತ್ತು ಎದುರುದಾರರ ದೈಹಿಕ ಸಂಪರ್ಕ ದಿಂದ ಅನಿತಾ ಜನಸಿದ್ದಾಳೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.

(ಎದುರುದಾರ ಪರ ವಕೀಲರ ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

SD/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ., ಸೇಡಂ